ಶ್ರೀ ಜಿ. ಪುಟ್ಟಸ್ವಾಮಿ.—ಅದನ್ನು ಸ್ಪಾಟ್ ಇನ್ಸ್‌ಪಕ್ಷನ್ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅನಾವಶ್ಯಕ, ಸ್ಪಾಟ್ ಇನ್‌ಪೆಕ್ಷನ್ ಮಾಡಿಯೇ ಹೇಳುತ್ತಿದ್ದೇನೆ. Madam speaker. Question Hour is over

## EXTRACTING TODAY FROM COCONUT PLANTS IN UDIPI TALUK

† ಶ್ರೀ ಎಸ್. ಬಂಗಾರಪ್ಪ (ಸೊರಬ).— ತಮ್ಮ ಒಪ್ಪಿಗೆಗಾಗಿ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಆದಕ್ಕೆ ತಮ್ಮ ಉತ್ತರ ಕೂಡ ಅದನ್ನು ಗಮನ ಸೆಳೆಯುವ ಸೂಚನೆಯನ್ನಾಗಿ ಮಾರ್ಪಾಡು ಮಾಡಿದ್ದೇವೆಂದು ಬಂದಿದೆ. ಅದರ ಬಗ್ಗೆ ಸರ್ಕಾರದವರು ಒಂದು ಸ್ಟೇಟ್‌ಮೆಂಟ್‌ನ್ನು ಕೊಡಲ್ಲಿ, ನನ್ನ ಅಭ್ಯಂತರ ಏನೂ ಇಲ್ಲ. ಈಗ ನಾನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಇಳಿಸುವರ ಬಗ್ಗೆ ಅತಿ ಮುಖ್ಯವಾದ ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.— ಮುಖ್ಯಮಂತ್ರಿಗಳು ಸಭೆಯಲ್ಲಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಮುಖ್ಯಮಂತ್ರಿಗಳು ಇಲ್ಲದಿದ್ದರೆ. ಮಾನ್ಯ ಚೆನ್ನಬಸಪ್ಪನವರು ಇದ್ದಾರೆ, ಇದು ಪ್ರಮುಖ ಪ್ರಶ್ನೆಯಾದ್ದರಿಂದ ನಾನು ಇದನ್ನು ಇಲ್ಲಿ ಹೇಳಬೇಕಾಗಿದೆ.

ಅಧ್ಯಕ್ಷರು.—ಅದನ್ನು ಕಾಲ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತನೆ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅಲ್ಲಿ ಪೋಲೀಸರ ಹೈ ಹ್ಯಾಂಡೆಡ್‌ನೆಸ್ ಜಾಸ್ತಿಯಾಗಿದೆ. ವಿಷಯವನ್ನು ಒಂದರೆಡು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಅದೂ ಉಡುಪಿ ತಾಲ್ಲೂಕಿನಲ್ಲಿ ಸುಮಾರು ೩೦-೪೦ ಸಾವಿರ ಜನ ತೆಂಗಿನ ಮರಗಳಿಂದ ಸೇಂದಿ ಇಳಿಸಿ ಜೀವನ ಮಾಡುತ್ತಿದ್ದಾರೆ. ಅವರಿಗೆ ನಾವು ಟ್ಯಾಪರ್ಸ್ ಎಂದು ಕರೆಯುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳುವುದಕ್ಕೆ, ಉತ್ತರ ಹೇಳುವವರು ಬೇಡವೆ ?

ಶ್ರೀ ಎಸ್. ಬಂಗಾರಪ್ಪ.—ವಿಷಯ ಅಷ್ಟೇ ಹೇಳುತ್ತೇನೆ, ಒಂದು ಲೀಟರ್ ಸೇಂದಿ ಇಳಿಸುವುದಕ್ಕೆ ೨೫ ಪೈಸೆಯನ್ನು ಸೇಂದಿ ಕಂಟ್ರಾಕ್ಟರುದಾರರು ಇವರಿಗೆ ಕೊಡುತ್ತಿದ್ದಾರೆ, ಅದನ್ನು ಸ್ವಲ್ಪ ಜಾಸ್ತಿ ಮಾಡಬೇಕು ಎಂದು ಟ್ಯಾಪರ್ಸ್ ಕೇಳುತ್ತಿದ್ದಾರೆ ಇವರಿಗೂ ಟ್ಯಾಡಿ ಕಂಟ್ರಾಕ್ಟದಾರರಿಗೂ ಸ್ವಲ್ಪ ಜಿಜ್ಞಾಸೆಯುಂಟಾಗಿದೆ. ಅಲ್ಲಿಯ ಕಂಟ್ರಾಕ್ಟದಾರರು ಏನು ಮಾಡುತ್ತಿದ್ದಾರೆಂದರೆ, ಅವರು ತಮ್ಮ ಹಣದ ಶಕ್ತಿಯಿಂದ ಉಡುಪಿಯಲ್ಲಿರತಕ್ಕ ಪೋಲೀಸರನ್ನು ಸಂಪೂರ್ಣವಾಗಿ ತಮ್ಮ ಬುಟ್ಟಿಯಲ್ಲಿ ಹಾಕಿಕೊಂಡಿದ್ದಾರೆ. ಅವರ ಮೇಲೆ ಸೀರಿಯಸ್ ಆಗಿ ಕ್ರಿಮಿನಲ್ ಕೇಸಸ್ ಹಾಕಿ ಉಡುಪಿಯಲ್ಲಿರತಕ್ಕ ಪೋಲೀಸರು ಟ್ಯಾಪರ್ಸ್ ಮನೆಗೆ ನುಗ್ಗಿ ಹೆಣ್ಣುಮಕ್ಕಳಿಗೆ ಹೊಡೆದಿದ್ದಾರೆ, ಕೇಸ್ ಹಾಕಿ ಕೋರ್ಟಿಗೆ ಅಲೆದಾಡಿಸುತ್ತಿದ್ದಾರೆ. ಈ ಜನರಿಂದ ಕಡಿಮೆ ರೇಟಿನಲ್ಲಿ ಸೇಂದಿಯನ್ನು ಇಳಿಸುವುದಕ್ಕೆ ಪೋಲೀಸರನ್ನು ಇಟ್ಟುಕೊಂಡು ಅವರಿಗೆ ಬೆದರಿಕೆಯುಂಟು ಮಾಡಿ, ಎನ್.ಬಿ.ಡಬ್ಲ್ಯೂ. ವಾರಂಟನ್ನು ಇಷ್ಯೂಮಾಡಿ ಅವರನ್ನು ಹೊಡೆದಿದ್ದಾರೆ. ಅವರ ಲೀಡರ್ ಶ್ರೀಧರ್ ಕೆಲಮಡಿ ಎನ್ನುವರು ನನಗೆ ಎರಡು ಮೂರು ಟೆಲಿಗ್ರಾಮ್‌ಗಳನ್ನು ಕೊಟ್ಟಿದ್ದಾರೆ. ಅದನ್ನು ಓದಿದರೆ ಎಂಥವರಿಗೂ ಅವರ ಮೇಲೆ ಕನಿಕರ ಬರುತ್ತದೆ. ಗೂಂಡಾಗಳನ್ನು ಸಂಪೂರ್ಣವಾಗಿ ಕೇರಳ ಮತ್ತು ತಮಿಳುನಾಡಿನಿಂದ ಹೈರ್ ಮಾಡಿ ತರಿಸಿದ್ದಾರೆ. ಶ್ರೀಧರ್ ಕೆಲಮಡಿ ಎನ್ನುವರು ಟ್ಯಾಪರ್ಸ್ ಅಸೋಸಿಯೇಷನ್‌ನ ಲೀಡರ್. ಅವರು ಉಡಿಪಿಯಲ್ಲಿ ಓಡಾಡುವುದೇ ಕಷ್ಟವಾಗಿದೆ. ಅವರಾಗಲಿ ಮನೆಗಳನ್ನು ನುಗ್ಗತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಅದಕ್ಕೆ ಅವರು ಪೋಲೀಸರಿಗೆ ಕಂಪ್ಲೇಂಟ್ ಕೊಟ್ಟರು, ಪೋಲೀಸರು ಅವರಿಗೆ ರಕ್ಷಣೆ ಕೊಡುತ್ತಾ ಇಲ್ಲ. ಪೋಲೀಸ್ ಸೂಪರಿಂಟೆಂಡೆಂಟ್ ರವರಿಗೆ, ಎಕ್ಸ್‌ಸೈಸ್ ಕಮಿಷನರ್ ಅವರಿಗೆ, ಮತ್ತು ಮುಖ್ಯಮಂತ್ರಿಗಳಿಗೆ ತಿಳಿಸಿದ್ದಾರೆ. ಎಂ ಎಲ್ ಎ ಗಳಿಗೂ ಅದನ್ನು ತಿಳಿಸಿದ್ದಾರೆ. ಅವರು ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದಾರೆ, ಆದ್ದರಿಂದ ಸರ್ಕಾರವನ್ನು ಕೇಳುವುದೆಂದರೆ, ಮೊದಲು ಶ್ರೀಧರ ಕೆಲಮಡಿ ಅವರಿಗೆ ರಕ್ಷಣೆ ಬೇಕು, ಅವರಿಗೆ ರಕ್ಷಣೆ ಕೊಡಬೇಕಾದುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಅವರ ಜೀವನಕ್ಕೆ ತಾವು ರಕ್ಷಣೆ ಕೊಡದಿದ್ದರೆ, ಅವರ ಪ್ರಾಣಕ್ಕೆ ಅಪಾಯ ತಪ್ಪಿದ್ದಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದವರ ಮನೋಭಾವ ಗೊತಿದೆ, ಶ್ರೀಧರ ಕೆಲಮಂಡಿ ಅವರ ಜೀವಕ್ಕೆ ಅಪಾಯವಿದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಇದರ ಬಗ್ಗೆ ಹೇಳಿದ್ದು ಸಾಲದೇ ?

ಶ್ರೀ ಕೋಣಂದೂರು ಲಿಂಗಪ್ಪ —ಪ್ರತಿನಿಮಿಷವೂ ಕೂಡ ಅವರ ಜೀವಕ್ಕೆ ಅಪಾಯವಿದೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ಎಲ್ಲಾ ವಿಷಯಗಳಿಗೂ ಹೀಗೆ ಮಾಡಿದರೆ, ಸಭೆಯ ಕಾಲ ವ್ಯರ್ಥವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ಪ್ರತಿನಿಮಿಷವೂ ಕೂಡ ಅವರ ಜೀವಕ್ಕೆ ಏನಾಗುತ್ತದೆ ಎನ್ನುವ ಭೀತಿ ಇದೆ. ಆದ್ದರಿಂದ ಆದಷ್ಟು ಬೇಗ ಇದರ ಬಗ್ಗೆ ವಿವರಣೆಯನ್ನು ತರಿಸಿಕೊಡಬೇಕು.

10-00 A.M.

SRI H. M. CHANNABASAPPA—The Hon. Member has drawn the attention of the Government to the effect that there is insecurity for the people. I should like to make it clear that Government will afford all protections to all law-abiding citizens and instructions will be issued to give protection to all law-abiding citizens. In the meanwhile the Hon. Speaker was pleased to say that it has been admitted as call attention for which the Government will make a detailed statement in due course.

ಶ್ರೀ ಎಸ್. ಬಂಗಾರಪ್ಪ.—ತಾವು ರಕ್ಷಣೆ ಕೊಡುತ್ತೇವೆಂದು ಹೇಳಿದಿರಿ, ಸಂತೋಷ. ಆದರೆ ಶ್ರೀಘ್ರವಾಗಿ ಈಗಲೇ ಕೊಡಬೇಕು, ಇದರ ಸೀರಿಯಸ್‌ನೆಸ್ ಸಂಪೂರ್ಣವಾಗಿ ಹೇಳುವುದಕ್ಕೆ ಹೋಗಿಲ್ಲ. ತತ್‌ಕ್ಷಣ ಕೊಡದೇ ಹೋದರೆ ಅಪಾಯವಿದೆ.

SRI H. M CHANNABASAPPA.—Action will be taken immediately to issue instructions to give protections to all abiding citizens.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಒಂದು ನೋಟಿಸ್ ಕಳುಹಿಸಿರುತ್ತೇನೆ. ಇದನ್ನು ಹೇಳಲು ಒಂದು ಕಾರಣವಿದೆ. ಒಬ್ಬ ಹೆಣ್ಣುಮಗಳು ಮುಖ್ಯೋಪಾಧ್ಯಾಯಿನಿ ಆ ಶಾಲೆಯಲ್ಲಿ...,

ಅಧ್ಯಕ್ಷರು.—ಈಗ ಬಂದಿರುವ ಕಾಗದವನ್ನು ನಾನೇ ಓದಿಲ್ಲ. ನಾನು ನೋಡುವುದಕ್ಕಾದರೂ ಸ್ವಲ್ಪ ಸಮಯ ಬೇಡವೇ ?

ಶ್ರೀ ಕಾಗೋಡು ತಿಮ್ಮಪ್ಪ.—ವಿದ್ಯಾ ಇಲಾಖೆಯ ಇಬ್ಬರು ಸಚಿವರೂ ಇದ್ದಾರೆ. ಉಡುಪಿ ಶಾಲೆಗೆ ಹೋಗಲು ರಕ್ಷಣೆ ಕೊಟ್ಟರೆ ಸಾಕು.

ಅಧ್ಯಕ್ಷರು.—ಬೇಕಾದರೆ ಸಚಿವರಿಗೇ ಕಳಿಸಿ ನಾನು ಓದುವುದಕ್ಕೆ ಮುಂಚೆಯೇ ಹೇಳುತ್ತಾ ಹೋದರೆ ಪೇಗೇ ;

## Indira Brigrade and Bangalore University Students Agitation

† ಶ್ರೀ ಕೋಣಂದೂರು ಲಿಂಗಪ್ಪ.—(ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಕ್ರಮಬದ್ಧವಾಗಿ ಒಂದು ಸಿಲುವಳಿ ಸೂಚನೆಯನ್ನು ಇಂದಿರಾ ಬ್ರಿಗೇಡ್ ಬಗ್ಗೆ ಕಳಿಸಿದ್ದೆ.

ಅಧ್ಯಕ್ಷರು.—ಅದಕ್ಕೆ ಜವಾಬು ಬಂದಿಲ್ಲವೇ